OS No. 55/2017
PW-3 ಜಯಣ್ಣ
Date:10.12.2024

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ಮತ್ತು 5 ರಿಂದ 9 ನೇ ಪ್ರತಿವಾದಿ ಪರ ಶ್ರೀ ಡಿ ಜೆ ಆರ್ ವಕೀಲರಿಂದಃ**

ಪ್ರಸ್ತುತ ದಾವೆಯಲ್ಲಿ ದಾವೆಯನ್ನು ಸನಂ.56/1 ಮತ್ತು 56/2 ಕ್ಕೆ ಸಂಬಂದಿಸಿದಂತೆ ಹೂಡಲಾಗಿದೆ. ಸನಂ.56 ರಲ್ಲಿ 1 ನೇ ಮತ್ತು ಎರಡನೇ ಪೋಡು ಿಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಎರಡು ಪೋಡುಗಳು ಯಾವ ಕಾರಣಕ್ಕಾಗಿ ಆಗಿವೆ ಎಂದು ನನಗೆ ಗೊತ್ತಿಲ್ಲ. ಸನಂ.56/1 ಅನ್ನು ಸಣ್ಣ ಬೋರಮ್ಮ ರವರು ಸಾಗುವಳಿ ಮಾಡುತ್ತಿದ್ದಾರೆ. ಸನಂ.56/1 ಜಮೀನಿನ ವಿಸ್ತೀರ್ಣ ನನಗೆ ಹೇಳಲಾಗುವುದಿಲ್ಲ. ಒಂದನೇ ಪ್ರತಿವಾದಿ ಸಣ್ಣ ಬೋರಮ್ಮ ರವರ ತಾತನ ಹೆಸರು ನಡ್ಡಿ ಬೋರಯ್ಯ ಎಂದರೆ ಸರಿ. ನಡ್ಡಿ ಬೋರಯ್ಯ ರವರಿಗೆ 6 ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಬೋರಯ್ಯ, ಚನ್ನಯ್ಯ, ಬಂಗಾರಯ್ಯ, ಕ್ಯಾಸಯ್ಯ, ಸಣ್ಣಬೋರಯ್ಯ ಮತ್ತು ಓಬಯ್ಯ ಎಂದರೆ ಸರಿ. ಇವರೆಲ್ಲರೂ ಸೇರಿಕೊಂಡು ಸನಂ.56/1 ಅನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಸನಂ.56/2 ಅನ್ನು ಬೋರಯ್ಯ ಯಾನೆ ಬುಡ್ಡಯ್ಯ ಮತ್ತು ಕೋಣದ ಚನ್ನಯ್ಯ ರವರು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಅವರಿಬ್ಬರು ತಮ್ಮ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ಖರೀದಿಸಿದ ವ್ಯಕ್ತಿಗಳೇ ಸನಂ.56/2 ಅನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಪ್ರಮಾಣ ಪತ್ರದಲ್ಲಿ ಎನು ಬರೆಯಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಎನು ಬರೆಯಲಾಗಿದೆ ಎಂದು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿ.

**ಉಳಿದ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಈಗಾಗಲೇ ದಿನಾಂಕ 19.09.2024 ರಿಂದ ಸಾಕಷ್ಟು ಕಾಲಾವಕಾಶವನ್ನು ನೀಡಿರುವ ಕಾರಣ ಹೆಚ್ಚಿನ ಕಾಲಾವಕಾಶವನ್ನು ನೀಡಲು ಯಾವುದೇ ಸಮಂಜನಸ ಕಾರಣ ಇರುವುದಿಲ್ಲ. ಉಳಿದ ಪ್ರತಿವಾದಿ ಪರ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.**
**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.

**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು 1 ಮತ್ತು 5 ರಿಂದ 9 ನೇ ಪ್ರತಿವಾದಿ ಪರ ಶ್ರೀ ಡಿ ಜೆ ಆರ್ ವಕೀಲರಿಂದಃ</u>**

ಸ ನಂ.56 ರಲ್ಲಿ ಪೋಡುಗಳು ಯಾವ ಇಸವಿಯಲ್ಲಿ ಆಗಿವೆ ಎಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಪೋಡುಗಳು ಆಗಿವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅಣ್ಣ ತಮ್ಮಂದಿರ ನಡುವೆ ಆಸ್ತಿ ಹಂಚಿಕೆಯಾದ ಕಾರಣ ಪೋಡುಗಳು ಆಗಿವೆ ಎಂದು ನುಡಿದಿರುತ್ತಾರೆ. ಆ ರೀತಿ ಹಂಚಿಕೆ ಯಾವ ಇಸವಿಯಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಸನಂ.56/1 ಅನ್ನು ನಡ್ಡಿ ಬೋರಯ್ಯ ರವರ ವಂಶಸ್ಥರು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸನಂ.56/2 ಅನ್ನು ಬೋರಯ್ಯ ಯಾನೆ ಬುಡ್ಡಯ್ಯ ಮತ್ತು ಕೋಣದ ಚನ್ನಯ್ಯ ರವರು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ನನಗೆ ತಿಳಿದಿರುವಂತೆ ಸನಂ.56/1 ಅನ್ನು ಬೋರಯ್ಯ ಯಾನೆ ನಡ್ಡಿ ಬೋರಯ್ಯ ರವರ ವಂಶಸ್ಥರೆ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ನಡ್ಡಿ ಬೋರಯ್ಯ ರವರಿಗೆ ಆರು ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಬೋರಯ್ಯ, ಚನ್ನಯ್ಯ, ಬಂಗಾರಯ್ಯ, ಸಣ್ಣಬೋರಯ್ಯ, ಕ್ಯಾಸಯ್ಯ ಮತ್ತು ಓಬಯ್ಯ ಆಗಿರುತ್ತದೆ. ಸದರಿ 6 ಜನರು ಮತ್ತು ಅವರ ವಂಶಸ್ಥರು ಸನಂ.56/1 ಅನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಸದರಿ 6 ಜನರು ಮತ್ತು ಅವರ ವಂಶಸ್ಥರು ಸನಂ.56/2 ಅನ್ನು ಯಾವ ಕಾಲಕ್ಕೂ ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿ. ಆ ಕಾರಣ ಸನಂ.56/1 ಜಮೀನಿಗೆ ನಡ್ಡಿ ಬೋರಯ್ಯ ಮತ್ತು ಅವರ ವಂಶಸ್ಥರು ಮಾತ್ರ ಮಾಲೀಕರಾಗಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ಸನಂ.56/1 ಮತ್ತು ಸನಂ.56/2 ಜಮೀನಿನಲ್ಲಿ ಎಲ್ಲರೂ ಒಟ್ಟಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಸುಳ್ಳು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ನಾನು ಅದಕ್ಕೆ ಸಹಿ ಮಾತ್ರ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಅಂಶ ಸುಳ್ಳು ಇರುತ್ತದೆ **ಎಂದರೆ ಸರಿ.**

**ಉಳಿದ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಈಗಾಗಲೇ ದಿನಾಂಕ 19.09.2024 ರಿಂದ ಸಾಕಷ್ಟು ಕಾಲವಕಾಶವನ್ನು ನೀಡಿರುವ ಕಾರಣ ಹೆಚ್ಚಿನ ಕಾಲಾವಕಾಶವನ್ನು ನೀಡಲು ಯಾವುದೇ ಸಮಂಜನಸ ಕಾರಣ ಇರುವುದಿಲ್ಲ. ಉಳಿದ ಪ್ರತಿವಾದಿ ಪರ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್‌?ಸಿ., ಚಳ್ಳಕೆರೆ.